
# ಸಮಾನ ಹೃದಯ

ಸಹೃದಯತೆಯೆಂಬುದು ಮಾನವನ ಒಳಗನ್ನು ಕುರಿತು ಮಾತನಾಡುವಂಥದ್ದು. ಮನುಷ್ಯ ಸಾಮಾನ್ಯವಾಗಿ ಅಂತರ್ಮುಖಿಯಾದಾಗ ಅವನೊಳಗಿರುವ ಅಂತಃಸಾಕ್ಷಿ ಜಾಗೃತವಾಗುತ್ತದೆ. ಈ ಅಂತಃಸಾಕ್ಷಿಯು ಸದಾ ಸತ್ಯದ ಪರವೂ ಮಾನವತೆಯ ಪರವೂ ಆಗಿರುತ್ತದೆ. ಈ ಅಂತಃಸಾಕ್ಷಿಗೆ ವರ್ಗ ತಾರತಮ್ಯವಾಗಲೀ ಲಿಂಗ ತಾರತಮ್ಯವಾಗಲೀ ಇರುವುದಿಲ್ಲ. ಆದುದರಿಂದಲೇ ಇದು ಸದಾ ಅಂತಃಕರಣದಿಂದ ಕೂಡಿರುತ್ತದೆ. ಸಮಾನ ದುಃಖವನ್ನು, ಸಮಾನ ನಗುವನ್ನು ಸಂವೇದಿಸುವ, ಸಂವೇದಿಸುವ ನಡೆಯಲ್ಲಿಯೇ ಅದನ್ನೇ ಮಿಡಿಯುವ ಮನೋನೆಲೆಯನ್ನು ಪಡೆಯುತ್ತದೆ. ಈ ಮನೋನೆಲೆಯನ್ನೇ ನಾವು ಸಹೃದಯತೆಯೆಂದು ಕರೆವುದು. ಅಂದರೆ ಸಮಾನ ಸಂವೇದನೆ, ಸಮಾನ ಮಿಡಿತ; ಎದೆಗೆ ಎದೆ ತುಡಿವ ಕ್ಷಣ; ಸಮಾನಾಂತರ ಭಾವ ವಿಭಾವಗಳೊಡನೆ ಬೆರೆವ ಸ್ಥಿತಿ. ಅಷ್ಟೇ ಅಲ್ಲ– ಅದು ಸಮಾನ ಭಾವಾಂತರಂಗದಲ್ಲಿ ಮನೋಸ್ಥಿತಿಯಲ್ಲಿ ಮುಳಿಗೇಳುವ ಮತ್ತು ಅದರ ಮತ್ತೊಂದು ಸಮಾನ ರೂಪವಾಗುವ ಕ್ರಿಯೆ.



ಸಹೃದಯತೆ ಎಂಬ ಸ್ಥಿತಿ ಸಮಾನವಾದ ಅಭಿರುಚಿಯನ್ನು ವ್ಯಕ್ತಪಡಿಸುತ್ತದೆ. ವ್ಯಕ್ತಿಯೊಬ್ಬನ ಅಭಿರುಚಿಯು ಅವನ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ. ಅವನ ಆಸಕ್ತಿಗಳು– ಅವನ ನಿರೀಕ್ಷೆಗಳು ಮತ್ತು ಬೆಳವಣಿಗೆಯ ನಡೆಗಳು ಅವನ ಅಭಿರುಚಿಯಿಂದ ನಿರ್ಧರಿತವಾಗುತ್ತದೆ. ಅಭಿರುಚಿಯೆಂಬ ಗುಣ ವ್ಯಕ್ತಿಗೆ ಹುಟ್ಟಿನಿಂದ ಬರುವಂಥದ್ದಲ್ಲ. ಅದು ಕಲಿಕೆಯಿಂದ ಬರುವಂಥದ್ದು. ನಮ್ಮ ಬಾಲ್ಯ ಆವರಣ ನಮ್ಮನ್ನು ಈ ನಿಟ್ಟಿನಲ್ಲಿ ಕಟ್ಟುತ್ತಾ ಹೋಗುತ್ತದೆ. ಇದೊಂದು ಬಗೆಯ ಸಂಸ್ಕೃತೀಕರಣಗೊಳಿಸುವ ಕ್ರಿಯೆ. ಇದರಲ್ಲಿ ನಮ್ಮ ತಂದೆ– ತಾಯಿ, ಗೆಳೆಯರು, ಶಾಲೆ– ಗುರುಗಳು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತಾರೆ. ಈ ಅರ್ಥದಲ್ಲೇ ನಮ್ಮ ಜನಪದರು 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?' ಎಂಬ ಗಾದೆಯನ್ನು ಸೃಷ್ಟಿಸಿರುವುದು! ಈ ಹಂತದಲ್ಲಿ ರೂಢಿಸಿಕೊಂಡ ಅಭಿರುಚಿ ನಮ್ಮ ಜೀವನಪರ್ಯಂತ ನಮ್ಮನ್ನು ಸುಸಂಸ್ಕೃತರನ್ನಾಗಿಸುತ್ತದೆ; ಸಹೃದಯಿಗಳನ್ನಾಗಿಸುತ್ತದೆ.

ಸಹೃದಯತೆಯುಳ್ಳವನು ಅಭಿರುಚಿಯುಳ್ಳವನಾಗಿರುವುರಿಂದ ಗುಣಗ್ರಾಹಿಯಾಗಿರುತ್ತಾನೆ. ಇತರರಲ್ಲಿರುವ ಗುಣವನ್ನು ಮೆಚ್ಚುವ, ಗುರುತಿಸುವ ಕ್ರಮ ಉತ್ತಮವಾದುದು. ಏಕೆಂದರೆ ಇತರರಲ್ಲಿರುವ ಗುಣಾತ್ಮಕ ಅಂಶಗಳನ್ನು ಕಂಡು ಅಸೂಯೆಪಡುವ ಮನಃಸ್ಥಿತಿಯು ಮಾನವತೆಯಿಂದ ದೂರ ನಿಲ್ಲುವಂಥದ್ದು. ಅದು ವ್ಯಕ್ತಿತ್ವವನ್ನು ಹಿಡಿಯಾಗಿ ಗ್ರಹಿಸುವ ಬದಲು ಒಡೆದು ನೋಡಲು ಯತ್ನಿಸುತ್ತದೆ. ಸದಾ ವ್ಯಕ್ತಿತ್ವದಲ್ಲಿ ಹುಳುಕನ್ನೇ ಹುಡುಕುವ ಕ್ರಿಯೆಯಲ್ಲಿ ಮಗ್ನವಾಗುತ್ತದೆ. ಇದರಿಂದ ಅದರ ಮನಸ್ಸು ಅಸ್ವಸ್ಥಗೊಳ್ಳುತ್ತದೆ; ನೆಮ್ಮದಿ ಕಳೆದುಕೊಳ್ಳುತ್ತದೆ. ಅನಾರೋಗ್ಯ ಪೀಡಿತವಾಗುತ್ತದೆ. ಈ ಅನಾರೋಗ್ಯ ಮನಸ್ಥಿತಿ ಒಂದು ಬಗೆಯ ಸೋಂಕಿನ ರೀತಿಯಲ್ಲಿ ತನ್ನ ಸುತ್ತಲ ಆವರಣವನ್ನು ಆವರಿಸಿ ರೋಗವನ್ನು ಹರಡುತ್ತಾ ಸಾಗುತ್ತದೆ. ಇಂದು ಇಂಥ ಮನಸ್ಥಿತಿಯು ರಕ್ತಬೀಜಾಸುರ ಸಂತತಿಯ ರೀತಿಯಲ್ಲಿ ಕೆಲಸದಲ್ಲಿ ತೊಡಗಿರುವುದರಿಂದಲೇ ನಮ್ಮ ಸಮಾಜದಲ್ಲಿ ಉಗ್ರವಾದ, ಭಯೋತ್ಪಾದನೆಗಳು ಸೃಷ್ಟಿಯಾಗಿ ಅಶಾಂತಿ ಮೂಡುತ್ತಿದೆ.

ವ್ಯಕ್ತಿತ್ವಗಳು ವಿಶಾಲಗೊಳ್ಳುವುದರ ಬದಲು ಕುಬ್ಜಗೊಂಡು ಜನ ವಿಮುಖ ಜೀವ ವಿಮುಖ ಸಮಾಜ ವಿಮುಖ ಸ್ಥಿತಿಯನ್ನು ತಲುಪುತ್ತಿವೆ. ಇಂಥ ವ್ಯಕ್ತಿತ್ವಗಳು ಸ್ವಾರ್ಥಿಗಳಾಗಿ ತಮ್ಮ ಸುತ್ತ ನಾನಾ ಬಗೆಯ ಗೋಡೆಗಳನ್ನು ಕಟ್ಟಿಕೊಳ್ಳುತ್ತವೆ.

ಸಹೃದಯತೆಯೆಂದರೆ ಸಮಾನವಾದ ಹೃದಯ ಮಿಡಿತವೆಂದು ಅರಿಯಬೇಕು. ಅಲ್ಲಿ ಪರಸ್ಪರ ಪ್ರೀತಿ, ಮಾತ್ರ ಇರುತ್ತದೆ. ಪ್ರೀತಿಗೆ ಕೊಡುವ ಗುಣ ಮಾತ್ರವಿರುತ್ತದೆ. ಅದು ಆಕ್ರಮಣಶೀಲವಲ್ಲ. ನೀಡುವುದರಲ್ಲಿ ಆನಂದ ಕಾಣುವ ಮನೋ ನೆಲೆಯನ್ನು ಮುಟ್ಟುವ ಪರಿಕ್ರಮ. ಅಂದಮೇಲೆ ದ್ವೇಷ, ಸ್ವಾರ್ಥ ಹೇಗೆ ಬರಲು ಸಾಧ್ಯ? ಇಂಥ ನಿಷ್ಕಲ್ಮಶ ಮನಸ್ಥಿತಿಯನ್ನು ನಮ್ಮ ದಾರ್ಶನಿಕರು ಅತ್ಯಂತ ಗೌರವದಿಂದ ಕಂಡು 'ಕವಿ ಸಮಾನ ಹೃದಯ' ಎಂದು ಕರೆದರು.

■ ಶಿಕಾಕು

# ಮಾತೇ ಮುತ್ತು

★ ಎಲ್ಲರನ್ನೂ ಪ್ರೇಮಿಸುವುದು ಎಲ್ಲಿಯವರೆಗೆ ಸಾಧ್ಯ ಆಗುವುದಿಲ್ಲವೋ, ಅಲ್ಲಿಯವರೆಗೆ ನೀವು ಯಾರನ್ನೂ ಪ್ರೇಮಿಸಲಾರಿರಿ.

–ತತ್ವಜ್ಞಾನಿ

★ ಪ್ರೇಮ ಅತಿಯಾದಾಗ ಅದು ಮನುಷ್ಯನನ್ನು ಗೌರವಹೀನನನ್ನಾಗಿಸುತ್ತದೆ.

–ಯೂರಿಪಿಡಿಸ್

★ ಅಕ್ಕ ಕೇಳವ್ವ ನಾನೊಂದ ಕನಸ ಕಂಡೆ... ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ನಿರ್ಭಯ ಚೆಲುವಂಗೆ ನಾನೊಲಿದೆನವ್ವ.

–ಅಕ್ಕಮಹಾದೇವಿ

★ ಒಂದು ಗಂಡಿಗೊಂದು ಹೆಣ್ಣು, ಹೇಗೋ ಏನೋ ಹೊಂದಿಕೊಂಡು, ದುಃಖ ಹಗುರ ಎನುತಿರೆ, ಪ್ರೇಮವೆನಲು ಹಾಸ್ಯವೇ?

–ಕೆ.ಎಸ್.ನರಸಿಂಹಸ್ವಾಮಿ

★ ಮಾತಾಡೂ ರೀತೀಲಿ ಮಾತಾಡಿದರ ಅಭಿನಯ ಅಂತಾರ... ಇಲ್ಲ ಅಂದ್ರ ಅದು ಕೃತಕ ಅಕ್ಕಾತಿ.

–ಚಿಂದೋಡಿ ಲೀಲಾ

★ ಯಾರೂ ಪೂರ್ತಿ ನಿಸ್ವಾರ್ಥಿಗಳಾಗಿರುವುದಿಲ್ಲ. ಹಾಗಿದ್ದರೆ ಬದುಕುವುದಕ್ಕೆ ಆಗುವುದಿಲ್ಲ.

–ಪಿ.ಲಂಕೇಶ್

★ ಪಾನ ನಿಷೇಧವನ್ನು ಜಾರಿಗೆ ತರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತದೆ ಎನ್ನುವುದಾದರೆ, ಜನರ ಆರೋಗ್ಯ ಮತ್ತು ನೈತಿಕ ಉನ್ನತಿಗಿಂತ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯವೇ ಮುಖ್ಯವಾಗಬೇಕೆ?

–ಟಿಪ್ಪುಸುಲ್ತಾನ್

★ ಯಾವುದು ಸತ್ಯವಲ್ಲ ಎಂದು ತಿಳಿದರೆ, ಏನಾಗದಿದ್ದರೂ ಸತ್ಯದ ಕಡೆ ಒಂದು ಹೆಜ್ಜೆ ಇಟ್ಟಂತೆಯೇ.

–ಕಾರ್ಡಿನಲ್ ನ್ಯೂಮನ್

★ ಸುಳ್ಳು ಬೆರೆತ ಸತ್ಯ, ತಾಮ್ರ ಬೆರೆತ ಬಂಗಾರದಂತೆ– ಅಶುದ್ಧವಾದರೂ ಚಲಾವಣೆಗೆ ಅನುಕೂಲ.

–ಫ್ರಾನ್ಸಿಸ್ ಬೇಕನ್

★ ನೂರಕ್ಕೆ ಒಬ್ಬ ದಾನಿ, ಸಾವಿರಕ್ಕೆ ಒಬ್ಬ ಶರಣ.

–ಗಾದೆ

★ ದುರುದ್ದೇಶದಿಂದ ಹೇಳಿದ ಸತ್ಯ, ಸೃಷ್ಟಿಸಬಹುದಾದ ಎಲ್ಲ ಸುಳ್ಳುಗಳಿಗಿಂತ ಕೆಟ್ಟದ್ದು.

–ವಿಲಿಯಂ ಬ್ಲೇಕ್

★ ಸಮಾಜಬಂಧ ಒಬ್ಬರ ಸುಖಕ್ಕಾಗಿ ಇಲ್ಲ; ಹತ್ತು ಜನರ ಸುಖಕ್ಕಾಗಿ ಇದೆ.

–ಎಂ.ವಿ.ಇನಾಂದಾರ್

★ ವ್ಯಕ್ತಿಯ ಸಮಾನತೆಗೆ ಎಷ್ಟು ಮನ್ನಣೆ ಬೇಕೋ, ವೈಯಕ್ತಿಕ ವಿಶೇಷತೆಗೆ ಅಷ್ಟೇ ಮನ್ನಣೆಯನ್ನು ಸಮಾಜ ಕೊಡಬೇಕು.

–ಶಿವರಾಮ ಕಾರಂತ

★ ಪ್ರಜೆ– ಸರಕಾರ ಗಂಡ–ಹೆಂಡಿರ ಹಾಗೆ. ಒಬ್ಬರು ಕೂಗಿದಾಗ ಇನ್ನೊಬ್ಬರು 'ಓ'ಗೊಡಬೇಕು; ಇಬ್ಬರೂ ಕೂಗುತ್ತಿದ್ದರೆ ಬರಿ ಗಲಾಟೆ, ಏನೂ ಆಗೋದಿಲ್ಲ.

–ಅಶ್ವತ್ಥ

★ ಸರ್ಕಾರದ ಕೆಲಸ ಕಡಿಮೆ ಇದ್ದಷ್ಟೂ ಒಳ್ಳೆಯದು.

–ಎಮರ್‌ಸನ್